<u>ದಿಃ 27-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : **3 ನೇ ಪ್ರತಿವಾದಿ ಪರ ಶ್ರೀ. DDD ವಕೀಲರಿಂದ:**</u>

ದಾವಾ ಆಸ್ತಿ ಸಂಃ 155/6 ಇದ್ದು 6 ಎಕರೆ 14 ಗುಂಟೆ ಇರುತ್ತದೆ. ದಾವಾ ಆಸ್ತಿಯನ್ನು ಖರೀದಿಗೆ ಪಡೆದಿರುತ್ತೇವೆ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯಿಂದ 2019 ರಲ್ಲಿ ಖರೀದಿ ಪಡೆದಿರುತ್ತೇವೆ. 2 ನೇ ಪ್ರತಿವಾದಿಗೆ ದಾವಾ ಆಸ್ತಿ ಹೇಗೆ ಬಂತು ಎಂಬುವುದು ನನಗೆ ಗೊತ್ತಿಲ್ಲ. ಸ.ನಂ. 155 ರಲ್ಲಿ ಒಟ್ಟು 6 ಹಿಸ್ಸಾಗಳು ಬರುತ್ತವೆ. 1 ನೇ ಪ್ರತಿವಾದಿಯ ಆಸ್ತಿ ಸ.ನಂ. 155/2 ಇರುತ್ತದೆ. ಎಷ್ಟು ಎಕರೆ ಎಷ್ಟು ಗುಂಟೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 2 ಮತ್ತು ವಾದಿಯ ನಡುವೆ ಹಾಗೂ ಪ್ರತಿವಾದಿ 2 ಮತ್ತು 3 ರ ನಡುವೆ ಒಂದು ಒಪ್ಪಿಗೆ ಪತ್ರ ಆಗಿರುತ್ತದೆ ಎಂದರೆ ಸರಿ. ಖರೀದಿ ಕರಾರು ಪತ್ರದ ಪ್ರಕಾರ 5 ಎಕರೆ 37 ಗುಂಟೆ ಮಾತ್ರಾ ಖರೀದಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ 6 ಎಕರೆ 14 ಗುಂಟೆ ಖರೀದಿಗೆ ಬರಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ಆಸ್ತಿ ಸಂಖ್ಯೆ 155/2 ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 3 ನೇ ಪ್ರತಿವಾದಿಗೆ 10 ಎಕರೆ 17 ಗುಂಟೆ ಮತ್ತು 2 ನೇ ಪ್ರತಿವಾದಿಗೆ 10 ಎಕರೆ 17 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಒಂದು ಜಮೀನು ಖರೀದಿಗೆ ಪಡೆಯಬೇಕಾದರೆ 11-ಇ ನಕ್ಷೆ ಕಡ್ಡಾಯವಾಗಿರುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿಯೂ ದಾವಾ ಆಸ್ತಿಯ ಉತ್ತರ ದಿಕ್ಕಿಗೆ 32 ಗುಂಟೆ ಅತಿಕ್ರಮಣ ಮಾಡಿರುತ್ತಾನೆ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಮಠಪತಿ ರವರ ಹೊಲ, ಪಶ್ಚಿಮಕ್ಕೆ 1 ನೇ ಪ್ರತಿವಾದಿ ಜಮೀನು, ಉತ್ತರಕ್ಕೆ 3 ನೇ ಪ್ರತಿವಾದಿ ರವರ ಜಮೀನು ಮತ್ತು ದಕ್ಷಿಣಕ್ಕೆ ಸ.ನಂ. 156 ಜಮೀನು ಇರುತ್ತದೆ. ನಾನು ಖರೀದಿ ಮಾಡಿದ ಜಮೀನಿಗೆ ಎಕರೆಗೆ 2 ಲಕ್ಷ ರೂ. ಅಂತೆ ಪ್ರತಿಫಲ ಹಣ ನೀಡಿರುತ್ತೇನೆ. 3 ನೇ ಪ್ರತಿವಾದಿ ಯಾವುದೇ ಜಮೀನು ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ.

<u>(ಈ ಸಮಯದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲು ಮುಂದೂಡಲಾಯಿತು.)</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ